**MVC 813/2025 PW-1**

**ದಿನಾಂಕಃ 10-08-2026 ರಂದು ಸಾಕ್ಷಿಯನ್ನು ಕರೆಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರ ಪರ: ಶ್ರೀ : ಎಂ.ವಿ.ಎಸ್. ವಕೀಲರಿಂದ.**

ನಾನು ಹತ್ತನೇ ತರಗತಿವರೆಗೂ ಓದಿರುತ್ತೇನೆ. ನನ್ನ ವಯಸ್ಸಯ ಈಗ 37 ವರ್ಷ ಇರುತ್ತದೆ. ನನ್ನ ಗಂಡನ ವಯಸ್ಸು 49 ಇರುತ್ತದೆ. ಅವರು ವ್ಯವಸಾಯ ಮಾಡಿಕೊಂಡಿದ್ದರು ಎಂದರೆ ಸರಿ. ನಮ್ಮ ಜಮೀನಿನ ಸರ್ವೆ ನಂಬರ 242/3 ಮತ್ತು 1/11 ಇರುತ್ತದೆ. ಎರಡು ಜಮೀನುಗಳು ನನ್ನ ಗಂಡನ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಒಂದು ಜಮೀನು ನನ್ನ ಹೆಸರಿಗೆ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ಗಂಡ ಬಿ.ಎಸ್.ಸಿ ಅಗ್ರಿಕಲ್ಚರ ಮಾಡಿರುತ್ತಾರೆ. ಜಮೀನಿಂದ ನಮಗೆ ವಾರ್ಷಿಕ ಆದಾಯ 12 ಲಕ್ಷ ಮೇಲ್ಪಟ್ಟು ಇತ್ತು. ಎಲ್ಲಾ ಖರ್ಚು ವೆಚ್ಚ ತೆಗೆದು ನಮಗೆ ಆದಾಯ 12 ಲಕ್ಷ ಮೇಲೆ ಬರುತ್ತಿತ್ತು. ನಮ್ಮ ಜಮೀನು ಪಡ ಜಮೀನು ಇದ್ದಿದರಿಂದ ನನ್ನ ಗಂಡನಿಗೆ ವಾರ್ಷಿಕ ಆದಾಯ 3-4 ಲಕ್ಷ ಇತ್ತು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನನ್ನ ಗಂಡ ಬೇರೆಯವರ ಜಮೀನು ಕೂಡ ಮಾಡುತ್ತಿದ್ದರು.

ಅಪಘಾತವು ದಿನಾಂಕ 06-06-2025 ರಂದು ಆಗಿರುತ್ತದೆ. ಅಪಘಾತ ಆದ ನಂತರ ನನ್ನ ಸಂಬಂಧೀಕರು ಪ್ರಕರಣ ಧಾಖಲು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆಸ್ಪತ್ರೆಯಲ್ಲಿ ಇದ್ದಿದ್ದರಿಂದ ಅದರ ವಿಚಾರ ಬಂದಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಅಣ್ಣ 2 ದಿನ ನಂತರ ಯಾವುದೋ ಒಂದು ವಾಹನವನ್ನು ಸೇರಿಸಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತವು ಬಿಗ್ ಬಜಾರ ಎದುರುಗಡೆ ಡಿವೈಡರ್ ಇದ್ದು ಅದನ್ನು ದಾಟಿ ಬರುವಾಗ ಗುಂಪಾ ಕಡೆಯಿಂದ ವಾಹನ ಬಂದು ಗುದ್ದಿರುತ್ತದೆ. ಅಪಘಾತವನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಅಪಘಾತ ನನ್ನ ಗಂಡ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಬಿಲ್ಲಗಳು

ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ. ಪರಿಹಾರ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ ಇರುವುದಿಲ್ಲ).**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).

**(ಓ.ಹೇ.ಕೇ.ಸ.ಇದೆ.)**

Sd/-

**ಎರಡನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್. ಸಿ ಬೀದರ.**